ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **953/2016**

ದಿಃ **16-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ನಯಾಜ್ ಬೇಗ್ | ಸಿ.ಡಬ್ಲ್ಯೂ | **22** |
| ವಯಸ್ಸು | 45 ವರ್ಷ | ಪಿ.ಡಬ್ಲ್ಯು: | **07** |
| ತಂದೆಯ ಹೆಸರು | ಇಬ್ರಾಹಿಂ ಬೇಗ್ | | |
| ವೃತ್ತಿ | ವೃತ್ತ ನಿರೀಕ್ಷಕರು ಗುಡಿಬಂಡೆ ವೃತ್ತ | | |
| ವಾಸಸ್ಥಳ | ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 02-02-2015 ರಿಂದ 30-04-2017 ರ ವರೆಗೆ ನಾನು ಗೌರಿಬಿದನೂರು ಪುರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕ 01-12-2015 ರಂದು ಬೆಳಗ್ಗೆ 08-15 ಸಮಯದಲ್ಲಿ ಚಾ.ಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 204/2015 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಠಾಣಾ ಮೊಕದ್ದಮೆ ಸಂಖ್ಯೆ 204/2015 ರ ಪ್ರಥಮ ವರ್ತಮಾನ ವರದಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-16 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16 ಎ ಎಂದು ಗುರುತಿಸಲಾಯಿತು.

ನಂತರ ಸದರಿ ಪ್ರಕರಣವನ್ನು ಮುಂದಿನ ತನಿಖೆಗಾಗಿ ಚಾ.ಸಾ 23 ರವರಿಗೆ ಹಸ್ತಾಂತರಿಸಿರುತ್ತೇನೆ. ನಂತರ ಅದೇ ದಿನ ಚಾ.ಸಾ 23 ರವರ ಮೌಖಿಕ ಆದೇಶದ ಮೇರೆಗೆ ಬೆಂಗಳೂರಿನ ಯಲಹಂಕದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಈ ಪ್ರಕರಣದಲ್ಲಿ ಮೃತಪಟ್ಟಿರುವ ಗಂಗರೆಡ್ಡಿರವರ ಶವ ಪಂಚನಾಮೆಯನ್ನು ಚಾ.ಸಾ 10 ರಿಂದ 12 ರವರ ಸಮಕ್ಷಮ ಬೆಳಗ್ಗೆ 10.45 ರಿಂದ ಮಧ್ಯಾಹ್ನ 12.45 ರ ವರೆಗೆ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಮೃತ ಗಂಗರೆಡ್ಡಿರವರ ಸಂಬಂಧಿಕರಾದ ಚಾ.ಸಾ 2, ಚಾ.ಸಾ 13 ಮತ್ತು 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ದಿನಾಂಕ 01-12-2015 ರ

ಶವ ಪಂಚನಾಮೆಯನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು ಸದರಿ ಶವ ಪಂಚನಾಮೆಯನ್ನು ನಿಪಿ-17 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-17 ಎ ಮತ್ತು ನಿಪಿ-17 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾ.ಸಾ 2,13 ಮತುತ 14 ರವರಿಂದ ತಾನು ಪಡೆದುಕೊಂಡಿರುವ ಹೇಳಿಕೆಗಳನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು ಸದರಿ ಹೇಳಿಕೆಗಳನ್ನು ನಿಪಿ-18 ರಿಂದ 20 ಹಾಗೂ ಅದರಿಲ್ಲಿರು ಸಾಕ್ಷಿಯ ಸಹಿಗಳನ್ನು ನಿಪಿ-18 ಎ ರಿಂದ ನಿಪಿ-20 ಎ ಎಂದು ಕ್ರಮವಾಗಿ ಗುರುತಿಸಲಾಯಿತು. ಸದರಿ ವರದಿ ಹಾಗೂ ಹೇಳಿಕೆಗಳನ್ನು ಚಾ.ಸಾ 23 ರವರಿಗೆ ನೀಡಿರುತ್ತೇನೆ.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎನ್.ವಿ ರವರಿಂದಃ

ನಾನು ಯಾವುದೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿಲ್ಲ ಹಾಗೂ ಯಾವುದೇ ಶವ ಪಂಚನಾಮೆಯನ್ನು ಕೈಗೊಂಡಿಲ್ಲದಿದ್ದರೂ ನಮ್ಮ ಇಲಾಖೆಯ ಅಂಕಿಅಂಶಗಳಿಗೋಸ್ಕರ ದಾಖಲೆಗಳನ್ನು ಸೃಷಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು